'ಯಾಕ್ ಬರಂಗಿಲ್ಲ? ನಿನ್ ಕೂಡೂ ಮಾತಾಡದಂಗ ಆಕ್ಕೇತಿ ಅಂತ, ಈಗ ಬರ್ತೇನಿ ಅಂದಿದ್ದ, ಮನೀ ಎಡ್ರೆಸ್ಸು ತಪ್ ಗಿಪ್ ಗುರ್ತ್ ಹಾಕೊಂಡಾನೋ ಏನೋ' ಅನ್ನುತ್ತ ಸರಸ್ವತಿ ಮನಸ್ಸಿಲ್ಲದ ಮನಸ್ಸಿನಿಂದ ಪ್ಲೇಟಿನಲ್ಲಿ ಒಗ್ಗರಣೆ ಬಡಿಸಿಕೊಂಡು ಶಂಕರನ ತಲೆಯ ಮೇಲೆ ಜರಿಯುವಂತೆ ಹೊರಗೆ ಟೀಪಾಯಿಯ ಮೇಲೆ ತಂದಿರಿಸಿದಳು. 'ನೀನೂ ಹಾಕ್ಕೊಂಡು ತಿಂದಬಿಡು, ನಿನ ಹರಿಶ್ಚಂದ್ರ ಮಹಾರಾಜ ಇನ್ ಮ್ಯಾಗ್ ಏನ್ ಬರಂಗಿಲ್ಲ ತೊಗೋ' ಅಂತ ಶಂಕರ ನಗುತ್ತ, ಅಷ್ಟೇ ಖಚಿತವಾದ ದನಿಯಲ್ಲಿ ಹೇಳಿದ್ದೇ ಸರಸ್ವತಿ 'ಅದೇನ? ಅಷ್ಟ್ ಸರೀ ಹೇಳ್ತೀ? ನಿನಗೇನ್ ಗೊತ್ತೇತಿ ಅವಂದು? ನೋಡ್ತಿರು ಬಂದ ಬರ್ತಾನ' ಅನ್ನುತ್ತ ತಿರುಗಿ ಗಂಡನ ಮೇಲೇ ಹರಿಹಾಯ್ದಳು. ಏಳು ಏಳೂವರೆ, ಎಂಟು ಎಂಟೂವರೆಯ ತನಕ ಕಾದಿದ್ದೇ ಬಂತು. ಸತ್ಯವಂತ ವಂಶದ ಹರಿಶ್ಚಂದ್ರನ ಪತ್ತೆಯೇ ಇಲ್ಲ.

ಎಂದಿನಂತೆ ಶಂಕರ 'ನಿನ್ನ ಫೇಸ್‌ಬುಕ್ಕಿನ ರಗಳೆಗಿಂತ ಸ್ವಲ್ಪ ಹೊತ್ತು ವಿಡಿಯೋ ಗೇಮ್ ಆಡುವುದೇ ನೆಮ್ಮದಿ' ಎಂದು ಹೇಳುತ್ತ , ತನ್ನ ಮೊಬೈಲ್ ಅನ್ನು ಕೂತಲ್ಲೇ ಚಾರ್ಜಿಗೆ ಹಾಕುತ್ತ ಅಲ್ಲೇ ಸೋಫಾದಲ್ಲಿ ಒರಗಿದ್ದ. 'ಯಾಕೆ ಇಂವ ಬರದೇ ಮೋಸ ಮಾಡಿದ?' ಅಂದುಕೊಳ್ಳುತ್ತ ಎಂಥದೋ ಅವಮಾನವಾದ ಮನಸ್ಥಿತಿಯಲ್ಲಿ ಸರಸ್ವತಿ ಫೇಸ್‌ಬುಕ್ ತೆರೆದು 'ಯಾಕೆ ಬರಲೇ ಇಲ್ಲ?' ಅಂತ ಒಂದು ಸಂದೇಶವಾದರೂ ಕಳಿಸೋಣ ಅಂತ ಪುನಃ ಕಂಪ್ಯೂಟರ್ ಎದುರು ಕೂತಳು.

ಫೇಸ್‌ಬುಕ್ ತೆರೆದದ್ದೇ ಒಂದೇ ನಿಮಿಷದ ಹಿಂದೆ ಕಳಿಸಿದ ಒಂದು ಸಂದೇಶ ಅವಳಿಗಾಗೇ ಕಾದಿತ್ತು. ಖುಷಿಯಿಂದ ಅಷ್ಟೇ ಲಗುಬಗೆಯಿಂದ ಮೆಸೇಜ್ ಬಾಕ್ಸಿನ ಮೇಲೆ ಕ್ಲಿಕ್ ಮಾಡಿದಳು. 'ಬೀನ್ಸು ಗಜ್ಜರಿ ತುರಿದು ಹಾಕಿದ್ದಕ್ಕೆ ಒಗ್ಗರಣೆ ಅವಲಕ್ಕಿ ರುಚಿಯಾಗಿತ್ತು, ಥ್ಯಾಂಕ್ಸ್' ಎಂಬ ಒಕ್ಕಣೆ ಅಲ್ಲಿತ್ತು. ಒಮ್ಮೆಲೇ ಶಾಕ್ ಆಗಿ ಥಟ್ಟನೆ ಎದ್ದವಳೇ ಸರಸ್ವತಿ, ಕುರ್ಚಿಯ ಬೆನ್ನಿಗೆ ಹಾಕಿದ್ದ ತಲೆದಿಂಬನ್ನು ಎತ್ತಿಕೊಂಡು ಹೊರಟಡಿ ಬಂದು, ಸೋಫಾದಲ್ಲಿ ಒರಗಿಕೊಂಡಿದ್ದ ನಮ್ಮ ಸತ್ಯ ಹರಿಶ್ಚಂದ್ರನನ್ನು 'ಅವಲಕ್ಕಿ ರುಚಿಯಾಗಿತ್ತೇ? ರುಚಿಯಾಗಿತ್ತೇ ಅವಲಕ್ಕಿ?' ಅಂತ ಕೇಳುತ್ತಲೇ ಕೈಯಲ್ಲಿದ್ದ ದಿಂಬಿನಿಂದ ರಬ್ ರಬ್ ಅಂತ ಬಾರಿಸತೊಡಗಿದಳು. 'ಸ್ಮಾರ್ಟಾ? ನಾನು ಕ್ಯೂಟಾ ?' ಅಂತ ಮತ್ತೆ ಮತ್ತೆ ದಿಂಬಿನಿಂದ ಗಂಡನನ್ನು ದಬದಬ ಬಡಿದಳು. 'ಹಹ್ಹಹಾ' ಎಂದು ಕೇಟಲೆಯ ಸದ್ದು ಮಾಡಿ ನಗುತ್ತ ಶಂಕರ, ಹೆಂಡತಿಯ ಹೊಡೆತದಿಂದ ತಪ್ಪಿಸಿಕೊಳ್ಳಲು ಕೂತಲ್ಲೇ ಹೆಣಗಾಡುತ್ತ 'ನನ್ನ ನಂಬರ್ ನನಗೇ ಕೊಟ್ಟರೆ! ಸ್ಮಾರ್ಟ್ ಅಲ್ಲದೇ ಮತ್ತೇನು?' ಅನ್ನುತ್ತ ದಿಂಬು ಕಸಿದು ಸರಸ್ವತಿಯನ್ನು ಮೃದುವಾಗಿ ಬರಸೆಳೆದುಕೊಂಡಿದ್ದ. ಮುಂದಿನ ದೃಶ್ಯದ ಸೆಲ್ಫಿಗಳಿಗೆ ಫೇಸ್‌ಬುಕ್ ತೆರೆದು 'ಹುಬ್ಬಳ್ಳಿ ಮಂದಿ' ಗ್ರೂಪ್ಪಿನಲ್ಲಿ ಸತ್ಯ ಹರಿಶ್ಚಂದ್ರನ ಅಕೌಂಟ್

---

## ಸುನಂದಾ ಪ್ರಕಾಶ ಕಡಮೆ

ಕನ್ನಡದ ಪ್ರಮುಖ ಕತೆಗಾರ್ತಿ ಸುನಂದಾ, ಕುಟುಂಬದ ಆವರಣದಲ್ಲಿ ನಡೆಯುವ ಮನುಷ್ಯ ವ್ಯಾಪಾರವನ್ನು ಸೂಕ್ಷ್ಮವಾಗಿ ಚಿತ್ರಿಸುವ ಕಲೆಗಾರ್ತಿ. ಅವರ 'ಪುಟ್ಟಪಾದದ ಹೆಜ್ಜೆ ಗುರುತು', 'ಗಾಂಧಿ ಚಿತ್ರದ ನೋಟು', 'ಕಂಬಗಳ ಮರೆಯಲ್ಲಿ' ಕಥಾಸಂಗ್ರಹಗಳು, 'ಬರೀ ಎರಡು ರೆಕ್ಕೆ', 'ದೋಣಿ ನಡೆಸುವ ಹುಟ್ಟು' ಕಾದಂಬರಿಗಳು. ಕವಿತೆ, ಅಂಕಣ ಬರಹ, ಮಕ್ಕಳ ಕಾದಂಬರಿಗಳನ್ನು ಅವರು ಪ್ರಕಟಿಸಿದ್ದಾರೆ. ಸುನಂದಾ, ಪ್ರಸ್ತುತ ಹುಬ್ಬಳ್ಳಿಯಲ್ಲಿ ನೆಲೆಸಿದ್ದಾರೆ.